ಓಎಸ್ ನಂ. : 1109/2017, ಪಿಡಬ್ಲೂ-1

ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 29.09.2023

**ಪಾಟೀಸವಾಲು 1 ನೇ ಪ್ರತಿವಾದಿ ಪರ ಶ್ರೀ ಕೆ.ವಿ.ಎ ವಕೀಲರಿಂದಃ**

ನಮ್ಮ ಅಜ್ಜನ ಹೆಸರು ಭೀಮನಗೌಡ. ನಮ್ಮ ಮುತ್ತಜ್ಜನ ಹೆಸರು ಕನಕನಗೌಡ ಮತ್ತು ಅವರ ಅಡ್ಡ ಹೆಸರು ಪೋಲೀಸ ಪಾಟೀಲ. ಮುತ್ತಜ್ಜ ಕನಕನಗೌಡನ ತಂದೆ ಹೆಸರು ಮಾಸನಗೌಡ. ಅವರ ಹೆಸರು ಭೀಮನಗೌಡ ಎಂದರೆ ಸರಿಯಲ್ಲ. ಕನಕನಗೌಡನ ತಂದೆಯ ಹೆಸರು ಮಾಸನಗೌಡ ಎಂದು ತೋರಿಸಿಕೊಡಲು ನಮ್ಮ

ಹತ್ತಿರ ವಂಶಾವಳಿ ಇರುವುದಿಲ್ಲ. ಆದರೆ ಹಿರಿಯರು ಈ ವಿಷಯ ತಿಳಿಸಿರುತ್ತಾರೆ. ನಮ್ಮ ಅಜ್ಜ ಭೀಮನಗೌಡನನ್ನು ನೋಡಿರುತ್ತೇನೆ. ಆತ ದಿನಾಂಕ 20.05.1992 ರಲ್ಲಿ ತೀರಿಕೊಂಡಿರುತ್ತಾರೆ. ಆತನ ಮರಣ ಪ್ರಮಾಣ ಪತ್ರ ಹಾಜರುಪಡಿಸಿಲ್ಲ. ಆದರೆ ಅಲಭ್ಯ ಪ್ರಮಾಣ ಪತ್ರ ಇರುತ್ತದೆ. ಆ ದಾಖಲೆಯನ್ನು ಹೊರತುಪಡಿಸಿ ಭೀಮನಗೌಡ ದಿನಾಂಕ 20.05.1992 ರಂದು ತೀರಿಕೊಂಡ ಬಗ್ಗೆ ಬೇರೆ ದಾಖಲೆ ಇರುವುದಿಲ್ಲ.

ನಮ್ಮ ತಂದೆ ಮಾಸನಗೌಡನಿಗೆ ಕನಕನಗೌಡ ಹಾಗೂ ಮಲ್ಲನಗೌಡ ಎಂದು ಸಹೋದರ ಸಹೋದರಿಯರು ಇರುತ್ತಾರೆ ಎಂದರೆ ಸರಿ. ಕನಕಗೌಡ ತೀರಿಕೊಂಡಿರುತ್ತಾರೆ. ಮಲ್ಲಮ್ಮ ಜೀವಂತ ಇರುತ್ತಾಳೆ. 2 ನೇ ವಾದಿ ಕನಕನಗೌಡನ ಹೆಂಡತಿ ಇರುತ್ತಾಳೆ. ಕನಕನಗೌಡ ದಿನಾಂಕ 29.09.2014 ರಂದು ತೀರಿಕೊಂಡಿರುತ್ತಾರೆ. 2 ನೇ ವಾದಿ ಶಂಕ್ರಮ್ಮ ಇವರು ಸಹ ತೀರಿಕೊಂಡಿರುತ್ತಾರೆ. ಈ ದಾವೆಯನ್ನು ನಾನು ಮತ್ತು ಶಂಕ್ರಮ್ಮ ಸೇರಿ ಹಾಕಿದ್ದೇವು. ಶಂಕ್ರಮ್ಮನ ಮಕ್ಕಳು ಹಾಗೂ ನನ್ನ ಮಧ್ಯ ಯಾವುದೇ ಜಗಳ ಇರುವುದಿಲ್ಲ. ನಮ್ಮ ತಂದೆಗೆ ನಾವು ಒಟ್ಟು 6 ಜನ ಮಕ್ಕಳು. ನನ್ನ ಸಹೋದರ ಸಹೋದರಿಯರ ಹೆಸರು ಕಸ್ತೂರಮ್ಮ ರಾಮನಗೌಡ, ದೊಡ್ಡನಗೌಡ, ಬಾಳನಗೌಡ ಮತ್ತು ಕಲ್ಲನಗೌಡ. ನನ್ನ ಸಹೋದರ ಸಹೋದರಿಯರು ಈ ದಾವೆ ಹಾಕಲು ನನಗೆ ಅಧಿಕಾರ ಪತ್ರ ಅಥವಾ ಒಪ್ಪಿಗೆ ಪತ್ರ ಬರೆದು ಕೊಟ್ಟಿಲ್ಲ. ಆದರೆ ಈ ಹಿಂದೆ ನಮ್ಮ ಮಧ್ಯ ಒಂದು ಡಿಕ್ರಿ ಆಗಿರುತ್ತದೆ ಎಂದರೆ ಸಾಕ್ಷಿ ಸ್ವತಃ ನುಡಿಯುತ್ತಾರೆ. ನಮ್ಮ ಅಜ್ಜ ಭೀಮನಗೌಡನಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲ ಹೆಂಡತಿಯ ಹೆಸರು ಮಾಸವ್ವ. 2 ನೇ ಹೆಂಡತಿಯ ಹೆಸರು ಸಹ ಮಾಸವ್ವ. ನಮ್ಮ ತಂದೆ ಕನಕನಗೌಡ ಹಾಗೂ ಮಲ್ಲವ್ವ 2 ನೇ ಹೆಂಡತಿ ಮಾಸವ್ವಳ ಮಕ್ಕಳು ಇರುತ್ತಾಳೆ ಎಂಬ ಪ್ರಶ್ನೇಗೆ ಅವರು ಮೊದಲ ಹೆಂಡತಿ ಅಥವಾ 2

ನೇ ಹೆಂಡತಿ ಮಕ್ಕಳು ಇರುತ್ತಾರೆ ನನಗೆ ಗೊತ್ತಿಲ್ಲ. ಭೀಮನಗೌಡನ ಇಬ್ಬರು ಹೆಂಡತಿಯರನ್ನು ನಾನು ನೋಡಿಲ್ಲ.

ಭೀಮನಗೌಡನ ಮೊದಲ ಹೆಂಡತಿ ಮಾಸವ್ವಳ ತಾಯಿಯ ಹೆಸರು ಗೌರವ್ವ. ಗೌರವ್ವಳಿಗೆ ಬಸನಗೌಡ ಅಂತಾ ಸಹೋದರ ಇದ್ದನು ಎಂದರೆ ಸರಿ. ಸದರಿ ಬಸನಗೌಡ ಮದುವೆ ಆಗದೆ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಬಸನಗೌಡ ಮತ್ತು ಗೌರವ್ವಳ ತಾಯಿಯ ಹೆಸರು ಬಾಳವ್ವ ಎಂದರೆ ಸರಿ. ಬಾಳವ್ವ ಕನಕನಗೌಡನ 2 ನೇ ಹೆಂಡತಿ ಎಂದರೆ ಸರಿಯಲ್ಲ. ಕನಕನಗೌಡನಿಗೆ ಒಬ್ಬಳೆ ಹೆಂಡತಿ ಇದ್ದು ಆಕೆಯೆ ಬಾಳವ್ವ ಇರುತ್ತಾಳೆ. ಹಾಗೇಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕನಕಗೌಡನ ತಂದೆಯ ಹೆಸರು ಭೀಮನಗೌಡ ಎಂದರೆ ಸರಿಯಲ್ಲ. ಸದರಿ ಕನಕನಗೌಡನಿಗೆ ಮಾಸವ್ವ ಅಂತಾ ಮೊದಲ ಹೆಂಡತಿ ಹಾಗೂ ಬಾಳವ್ವ ಅಂತಾ 2 ನೇ ಹೆಂಡತಿ ಇದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಜಾಲವ್ವಳನ್ನು ನೋಡಿರುತ್ತೇನೆ. ಆಕೆಗೆ ಜಾನವ್ವ ಎಂದು ಸಹ ಕರೆಯುತ್ತಾರೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಮಗ ಎಂದರೆ ಸರಿ. 2 ನೇ ಪ್ರತಿವಾದಿ ಜಾಲವ್ವ ಈಕೆಗೆ ಗ್ಯಾನಪ್ಪ ಅಂತಾ ಮತ್ತೊಬ್ಬ ಮಗ ಇದ್ದನು ಎಂದರೆ ಸರಿ. 2 ನೇ ಪ್ರತಿವಾದಿಯ ತಂದೆ ತಾಯಿಯ ಹೆಸರು ಗೊತ್ತಿಲ್ಲ. 2 ನೇ ಪ್ರತಿವಾದಿಯ ತಾಯಿಯ ಹೆಸರು ಮಾಸವ್ವ ಮತ್ತು ತಂದೆಯ ಹೆಸರು ಕನಕಗೌಡ ತಂದೆ ಭೀಮನಗೌಡ ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ಕನಕಗೌಡನ ಮೊದಲ ಹೆಂಡತಿಯ ಮಗಳು ಇರುತ್ತಾಳೆ ಎಂದರೆ ಗೊತ್ತಿಲ್ಲ.

ಈ ದಾವೆಯನ್ನು 8 ಜಮೀನುಗಳ ಮೇಲೆ ಮಾಡಿರುತ್ತೇನೆ. ದಾವಾ ಜಮೀನು ಸರ್ವೆ ನಂ. 32 ಹಾಗೂ 45 ಗಳು 1 ನೇ ಪ್ರತಿವಾದಿಗೆ ಸಂಬಂದಪಟ್ಟಿರುತ್ತೇವೆ. ಉಳಿದ ದಾವಾ ಜಮೀನುಗಳು ನಮಗೆ ಸಂಬಂದ

ಪಟ್ಟಿರುತ್ತವೆ. ಪ್ರತಿವಾದಿಯರ ಆಸ್ತಿ ತೋರಿಸಲು ಸರ್ವೆ ನಂ. 32 ಮತುತ 45 ನ್ನು ದಾವೆಯಲ್ಲಿ ಸೇರಿಸಿರುತ್ತೇವೆ. 1 ನೇ ಪ್ರತಿವಾದಿಗೆ ಈ ಎರಡು ದಾವಾ ಆಸ್ತಿಗಳು ಹೇಗೆ ಬಂದಿರುತ್ತವೆ ಮತ್ತು ಯಾರಿಂದ ಬಂದಿರುತ್ತವೆ ಗೊತ್ತಿಲ್ಲ. ಅನುಸೂಚಿ 1 ರಿಂದ 6 ಆಸ್ತಿಗಳ ಮೂಲ ಮಾಲೀಕರು ಬಾಳಮ್ಮ ಗಂಡ ಕನಕನಗೌಡ ಪೋಲೀಸ ಪಾಟೀಲ ಇದ್ದರು. ಬಾಳಮ್ಮಳಿಗೆ ಈ ಆಸ್ತಿಗಳು ತವರು ಮನೆಯಿಂದ ಬಂದಿರತ್ತವೊ ಗಂಡನಿಂದ ಬಂದಿರತ್ತವೊ ನನಗೆ ಮಾಹಿತಿ ಇಲ್ಲ. ಅಸಲು ದಾವೆ 354/16 ದಾವೆ ಮಾಡಿದಾಗ ಈ 6 ಜಮೀನುಗಳು ನನ್ನ ದೊಡ್ಡಪ್ಪ ಕನಕನಗೌಡ ಭೀಮನಗೌಡ ಪೋಲೀಸ ಪಾಟೀಲ ಇವರ ಹೆಸರಿನಲ್ಲಿದ್ದವು. ಕನಕನಗೌಡನಿಗೆ ಸದರಿ ಆಸ್ತಿಗಳು ಬಾಳಮ್ಮಳಿಂದ ಬಂದಿರುತ್ತವೆ. ಬಾಳಮ್ಮಳಿಂದ ಆ ಆಸ್ತಿಗಳು ಬಂದ ಬಗ್ಗೆ ವಕೀಲರಿಗೆ ದಾಖಲೆ ಕೊಟ್ಟಿರುತ್ತವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ಗೊತ್ತಿಲ್ಲ.

1959 ರಲ್ಲಿ 1 ರಿಂದ 6 ದಾವಾ ಆಸ್ತಿಗಳು ಬಾಳಮ್ಮಳಿಂದ ಕನಕನಗೌಡನಿಗೆ ವರ್ಗಾವಣೆ ಆಗಿರುತ್ತದೆ. ಕನಕನಗೌಡ ತೀರಿಕೊಂಡಾಗ ಆತನ ವಯಸ್ಸು 60 ವರ್ಷ ಇತ್ತು. 1 ರಿಂದ 6 ದಾವಾ ಆಸ್ತಿಗಳು ನನ್ನ ದೊಡ್ಡಪ್ಪ ಕನಕನಗೌಡ ಇವರಿಗೆ ಸೇರಿದ ಆಸ್ತಿಗಳು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು 2 ನೇ ಪ್ರತಿವಾದಿಯ ತಂದೆ ಕನಕನಗೌಡನಿಗೆ ಸೇರಿದ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ 1 ರಿಂದ 6 ದಾವಾ ಆಸ್ತಿಗಳು ನನ್ನ ತಂದೆಯಿಂದ ಬಂದಿರುತ್ತವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಕನಕಗೌಡನ ಮೊದಲ ಹೆಂಡತಿಯ ಮಗಳಾಗಿದ್ದ ಕಾರಣ ಅವುಗಳಿಗೆ ವಾರಸಾ ನಾತೆಯಿಂದ ಮಾಲೀಕಳಾಗಿರುತ್ತಾಳೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹಳ್ಳಿ ಹೆಣ್ಣು ಮಗಳು ಇದ್ದು ಸದರಿ ಆಸ್ತಿಗಳನ್ನು ತನ್ನ ಹೆಸರಿಗೆ ಮ್ಯುಟೇಶನ ಮಾಡಿ ಕೊಂಡಿರಲಿಲ್ಲ ಎಂದರೆ

ಸರಿಯಲ್ಲ. 1 ರಿಂದ 6 ದಾವಾ ಆಸ್ತಿಗಳ ಮೇಲೆ ನಮಗೆ ಯಾವುದೆ ಹಕ್ಕು ಇಲ್ಲದೆ ಇದ್ದರು ನಮ್ಮ ದೊಡ್ಡಪ್ಪನ ಹೆಸರು ಕನಕನಗೌಡ ತಂದೆ ಭೀಮನಗೌಡ ಇರುವುದನ್ನು ದುರುಪಯೋಗಪಡಿಸಿಕೊಂಡು ಅಸಲು ದಾವೆ 354/2016 ರಲ್ಲಿ ಸುಳ್ಳು ದಾವೆ ಹಾಕಿ ಡಿಕ್ರಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

1 ರಿಂದ 6 ದಾವಾ ಆಸ್ತಿಗೆ ಬಾಳಮ್ಮ ಗಂಡ ಕನಕನಗೌಡ ಮಾಲೀಕರಾಗಿದ್ದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಳವ್ವಳಿಂದ ಸದರಿ ದಾವಾ ಆಸ್ತಿಗಳು ನೇರವಾಗಿ ನನ್ನ ದೊಡ್ಡಪ್ಪ ಕನಕನಗೌಡನ ಹೆಸರಿಗೆ ವರ್ಗಾವಣೆ ಆಗಿದ್ದವು. ಗೌರವ್ವ ಮತ್ತು ಆಕೆಯ ಮಾಸವ್ವಳ ಹೆಸರಿಗೆ ವರ್ಗಾವಣೆ ಆಗಿಲ್ಲ. ದಾವಾ ಜಮೀನು ಸರ್ವೆ ನಂ. 21 ಹಿಸ್ಸಾ 1 ರ 6 ಎಕರೆ 21 ಗುಂಟೆ ಜಾಲವ್ವಳ ಹೆಸರಿನಲ್ಲಿದೆ ಎಂದರೆ ಸರಿ. ನಿಪಿ-7 ಪಹಣಿ ಪ್ರಕಾರ ಆರ ಆರ ಟಿ ಪ್ರಕರಣ ನಂ.39/90-91 ರಲ್ಲಿ ದಿನಾಂಕ 31.12.1991 ರ ಆದೇಶದ ಪ್ರಕಾರ 2 ನೇ ಪ್ರತಿವಾದಿಯ ಹೆಸರು ಪಹಣಿಯಲ್ಲಿ ನಮೂದು ಆಗಿರುವುದಾಗಿ ತೋರಿಸಿರುತ್ತಾರೆ ಎಂದರೆ ಸರಿ. ತಹಶೀಲ್ದಾರ ಮಾಡಿದ ಮೇಲೆ ಹೇಳಿದ ಆದೇಶದ ಪ್ರತಿಯನ್ನು ನೋಡಿರುತ್ತೇನೆ. ಸದರಿ ಆರ ಆರ ಟಿ ಪ್ರಕರಣದಲ್ಲಿ ನನ್ನ ದೊಡ್ಡಪ್ಪ ಕನಕನಗೌಡ ತಕರಾರು ಸಲ್ಲಿಸಿದ್ದರು. ಆ ಜಮೀನು ಬಾಳಮ್ಮಳಿಂದ ಬಂದಿರುವುದಾಗಿ ನನ್ನ ದೊಡ್ಡಪ್ಪ ತಕರಾರು ಸಲ್ಲಿಸಿದ್ದರು. ನಮ್ಮ ದೊಡ್ಡಪ್ಪನ ತಕರಾರು ತಳ್ಳಿಹಾಕಿ ಪೋತಿ ವಿರಸಾತ ಆಧಾರದ ಮೇಲೆ 2 ನೇ ಪ್ರತಿವಾದಿಯ ಹೆಸರಿಗೆ ಮ್ಯುಟೇಶನ ಮಾಡಲು ತಹಶೀಲ್ದಾರ ಆದೇಶ ಮಾಡಿದ್ದರು ಎಂದರೆ ಸರಿ. ಆ ಆದೇಶ ಆಗುವ ಪೂರ್ವದಲ್ಲಿ ಆ ಜಮೀನಿನ ಪಹಣಿ ಮಾಸವ್ವ ಗಂಡ ಕನಕಗೌಡನ ಹೆಸರಿನಲ್ಲಿ ಇತ್ತು ಎಂದರೆ ಗೊತ್ತಿಲ್ಲ. ತಹಶೀಲ್ದಾರ ಇವರ ಸದರಿ ಆದೇಶವನ್ನು ನನ್ನ ದೊಡ್ಡಪ್ಪ ಮತ್ತು ತಂದೆ ಎಲ್ಲಿಯು ಪ್ರಶ್ನಿಸಿಲ್ಲ. ನನ್ನ ದೊಡ್ಡಪ್ಪನ ಮಗಳಾದ ಮಾಸವ್ವ ಈಕೆಯನ್ನು 1 ನೇ ಪ್ರತಿವಾದಿಯ

ಸಹೋದರನಾದ ಗ್ಯಾನಪ್ಪನಿಗೆ ಮದುವೆ ಮಾಡಿಕೊಟ್ಟಿದ್ದ ಕಾರಣ ಅವರೆ ಆ ಜಮೀನು ಉಪಭೋಗ ಮಾಡುತ್ತಿದ್ದಾರೆ ಅಂತಾ ನಮ್ಮ ತಂದೆ ಹಾಗೂ ದೊಡ್ಡಪ್ಪ ತಹಶಿಲ್ದಾರ ಆದೇಶ ಪ್ರಶ್ನಿಸಿರಲಿಲ್ಲ. ನನಗೆ ತಿಳುವಳಿಕೆ ಬಂದ ನಂತರ ನಾನು ಸಹ ಪ್ರಶ್ನಿಸಿಲ್ಲ. ಏಕೆಂದರೆ ಗ್ಯಾನಪ್ಪನ ಹೆಂಡತಿ ನನ್ನ ಸಹೋದರಿ ಇರುತ್ತಾಳೆ. 1990 ರಲ್ಲಿ ತಹಶೀಲ್ದಾರ ಆದೇಶ ನಂತರದಿಂದ ಸರ್ವೆನಂ. 21 ನ್ನು 1 ನೇ ಪ್ರತಿವಾದಿ ಹಾಗೂ ಗ್ಯಾನಪ್ಪ ಇಬ್ಬರು ಸಾಗುವಳಿ ಮಾಡುತ್ತಿದ್ದರು. ಈಗಲೂ ಸಹ ಆ ಸದರಿ ಜಮೀನು ಚಂದಾಲಿಂಗಪ್ಪ ಹಾಗೂ ಗ್ಯಾನಪ್ಪನ ಕುಟುಂಬದವರೆ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ.

ನಾವು ಈ ಹಿಂದೆ ಮಾಡಿದ ಅಸಲು ದಾವೆ ನಂ. 354/16 ರಲ್ಲಿ ಸರ್ವೆ ನಂ. 21 ಹಿಸ್ಸಾ 1 ವಿಸ್ತೀರ್ಣ 6 ಎಕರೆ 21 ಗುಂಟೆ ನ್ನು ಸೇರಿಸಿಲ್ಲ ಎಂದರೆ ಸರಿ. ಸದರಿ ಜಮೀನು ನಮ್ಮ ಕುಟುಂಬಕ್ಕೆ ಸಂಬಂದ ಇರುವುದಿಲ್ಲಮತ್ತು ನಾವು ಅದಕ್ಕೆ ಮಾಲೀಕರಾಗಲಿ ಕಬ್ಜೆದಾರರಾಗಲಿ ಇರುವುದಿಲ್ಲ ಅದೇ ಕಾರಣಕ್ಕೆ ಅಸಲು ದಾವೆ 354/16 ರಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 21 ಹಿಸ್ಸಾ 3 ಅ ಹಾಗೂ ಸರ್ವೆ ನಂ. 21 ರ ಮದ್ಯ ಮತ್ತೊಂದು ಪಟ್ಟಿ ಇರುತ್ತದೆ. ಆ ಸದರಿ ಪಟ್ಟಿ ಮೇಘರಾಜ ವಜ್ಜದ ಇವರಿಗೆ ಸೇರಿದ್ದು ಅದರ ಸರ್ವೆ ನಂ. 21 ಹಿಸ್ಸಾ 2 ರ ವಿಸ್ತೀರ್ಣ 4 ಎಕರೆ ಇರುತ್ತದೆ. ಮೇಘರಾಜ ವಜ್ಜಲ ಇವರು ಸಿದ್ದಪ್ಪ ಮಲ್ಲಪ್ಪ ಕಮತಗಿ ಇವರಿಂದ ಖರೀದಿ ಮಾಡಿರುತ್ತಾರೆ. ಅದು ಮೂಲಾತಹಃ ಬಾಳಮ್ಮಳಿಗೆ ಸೇರಿತ್ತು. ಬಾಳಮ್ಮ ಸಿದ್ದಪ್ಪ ತಂದೆ ಮಲ್ಲಪ್ಪ ಕಮತಗಿ ಇತನಿಗೆ ಖರೀದಿಗೆ ಕೊಟ್ಟಿದ್ದು. ಈ ಕುರಿತು ದಾಖಲೆಗಳು ಇರುತ್ತವೆ.

ನಿಪಿ-4 ರಿಂದ 6 ಮತ್ತು 11 ರಲ್ಲಿ ನಮೂದು ಮಾಡಿರುವ ಜಮೀನುಗಳಲ್ಲಿ 1959 ರಲ್ಲಿ ನಮ್ಮ ದೊಡ್ಡಪ್ಪ ಕನಕನಗೌಡನ ಹೆಸರಿನಲ್ಲಿ ಮ್ಯುಟೇಶನ ಆಗಿರುತ್ತದೆ.

ಈ ಕುರಿತು 1959 ರ ಮ್ಯುಟೇಶನರ ಆದೇಶ ನಮ್ಮ ಹತ್ತಿರ ಇರುತ್ತದೆ. ನಿಪಿ-4 ರಿಂದ 6 ಮತ್ತು 11 ರಲ್ಲಿ ನಮೂದು ಮಾಡಿರುವ ವ್ಯಕ್ತಿ ಕನಕಗೌಡ ತಂದೆ ಭಿಮನಗೌಡ ನಮ್ಮ ದೊಡ್ಡಪ್ಪ ಇರುವುದಿಲ್ಲ ಆತ 2 ನೇ ಪ್ರತಿವಾದಿಯ ತಂದೆ ಕನಕನಗೌಡ ತಂದೆ ಭೀಮನಗೌಡ ಇರುತ್ತಾನೆ ಎಂದರೆ ಸರಿಯಲ್ಲ.

ಸರ್ವೆ ನಂ. 9 ಹಿಸ್ಸಾ 4 ಬಿ ಹಾಗೂ ಸರ್ವೆ ನಂ. 20 ಮೂಲತಹಃ ಬಾಳಮ್ಮಳ ಹೆಸರಿಗೆ ಇದ್ದವು. ಬಾಳಮ್ಮಳ ಹೆಸರಿನಿಂದ ಈ ಎರಡೂ ಆಸ್ತಿಗಳು ನಮ್ಮ ದೊಡ್ಡಪ್ಪನಾದ ಕನಕಪ್ಪನ ಹೆಸರಿಗೆ 1959 ರಲ್ಲಿ ವರ್ಗಾವಣೆ ಆಗಿರುತ್ತದೆ. ಈ ಕುರಿತು ದಾಖಲೆ ಲಬ್ಯ ಇರುತ್ತದೆ. ಸದರಿ ಎರಡು ಜಮೀನುಗಳು 1980 ರಲ್ಲಿ ನಮ್ಮ ದೊಡ್ಡಪ್ಪನಿಂದ ನಮ್ಮ ತಂದೆಯ ಹೆಸರಿಗೆ ಮ್ಯುಟೇಶನ ಆಗಿರುತ್ತವೆ. ಈ ಕುರಿತು ಮ್ಯುಟೇಶನ ಅರ್ಜಿ ಹಾಕಿದ್ದರು ದೊರಕಿರುವುದಿಲ್ಲ. ಈ ಸಂಬಂದ ಹಿಂಬರಹವನ್ನು ನೀಡಿರುವುದಿಲ್ಲ. ನಮ್ಮ ತಂದೆ ಹಾಗೂ ದೊಡ್ಡಪ್ಪನ ಮದ್ಯ ಎಲ್ಲಾ ಆಸ್ತಿಗಳ ಸಂಬಂದ ವಿಭಾಗ ಆಗಿರುತ್ತವೆ. ಆದರೆ ವಿಭಾಗದ ಬಗ್ಗೆ ಯಾವುದೇ ದಾಖಲೆ ಬರೆದುಕೊಂಡಿಲ್ಲ. ವಿಭಾಗದಲ್ಲಿ ಮಲ್ಲಮ್ಮ ಇವರಿಗೆ ಆಸ್ತಿ ಕೊಟ್ಟಿಲ್ಲ. ಸದರಿ ವಿಭಾಗದಲ್ಲಿ ನಮ್ಮ ತಂದೆ ಭಾಗಕ್ಕೆ ಸರ್ವೆ ನಂ. 84 ಹಿಸ್ಸಾ 2 +3+4+5 ವಿಸ್ತೀರ್ಣ 6 ಎಕರೆ 16 ಗುಂಟೆಯಲ್ಲಿ 3 ಎಕರೆ 7 ಗುಂಟೆ , ಸರ್ವೆ ನಂ. 9 ಹಿಸ್ಸಾ 4 ಬಿ ರ 5 ಎಕರೆ 13 ಗುಂಟೆ , ಸರ್ವೆ ನಂ. 21 ಹಿಸ್ಸಾ 3 ಆ ರಲ್ಲಿ 1 ಎಕರೆ 8 ಗುಂಟೆ , ಸರ್ವೆ ನಂ. 20 ರಲ್ಲಿ 24 ಗುಂಟೆ ಬಂದಿತ್ತು. ಸರ್ವೆ ನಂ. 21 ಹಿಸ್ಸಾ 3 ಅ ರಲ್ಲಿ ತನಗೆ ಬಂದ 1 ಎಕರೆ 8 ಗುಂಟೆಯನ್ನು ನಮ್ಮ ತಂದೆ ಸಿದ್ದವ್ವ ಗಂಡ ಬೊಮ್ಮಯ್ಯ ಆದಾಪೂರಮಠ ಇವರಿಗೆ ಮಾರಾಟ ಮಾಡಿರುತ್ತಾರೆ. ಯಾವ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ ಗೊತ್ತಿಲ್ಲ ಆದರೆ 25 ವರ್ಷಗಳಾಗಿರುತ್ತವೆ.

ಸರ್ವೆ ನಂ. 84 ರಲ್ಲಿ ನಮ್ಮ ತಂದೆ ಹೆಸರಿಗೆ ವಿಭಾಗದ ಪ್ರಕಾರ ಬೇರೆ ವಿಭಾಗ ಆಗಿರುವುದಿಲ್ಲ. ಅದು ಇನ್ನೂ ಕನಕನಪ್ಪನ ಹೆಸರಿಗೆ ಇದೆ. ಆಕಾರ ಬಂದ ಹೊಂದಾಣಿಕೆ ಆಗದ ಕಾರಣ ನಮ್ಮ ತಂದೆ ವಿಭಾಗದ ಪ್ರಕಾರ ಆ ಜಮೀನು ತಮ್ಮ ಹೆಸರಿಗೆ ಮಾಡಿಸಿಕೊಂಡಿಲ್ಲ.

**ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ